doc-600
T·P-2

Reg No B G 155 4 12 72

in The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವಚ್ಛ
ಮಹೋತ್ತಮ
ನೆರವೇರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕರುಣಾನಿಧಿಯವರಿಂದ ವಿಶ್ವಾಸಮತ ಕೋರಿಕೆ

ಮೈಸೂರು ಸರ್ಕಾರ

ನಂ. ಡಿಎಸ್‌ಎಂ/2143/72-73

ಟೆಂಡರ್ ಪ್ರಕಟಣೆ

1973-74 ನೇ ಸಾಲಿಗೆ ಈ ಕೆಳಗೆ ಸೂಚಿಸಿರುವ ಬಾಬುಗಳಿಗೆ ಪ್ರತಿ ಬಾಬಿನ ಮುಂದೆ ನಮೂದಿಸಿರುವ ವೇಳೆಯಲ್ಲಿ 22-12-1972 ರಂದು ಈ ಕೆಳಗೆ ಸಹಿ ಮಾಡಿರುವವರಿಂದ ಈ ಕಚೇರಿಯಲ್ಲಿ, ಮಂಡ್ಯದ ಜನರಲ್ ಆಸ್ಪತ್ರೆಯಲ್ಲಿ, ಮುದ್ರಣವಾದ ವಿಧಾಯಕವಾದ್ಘಾರಂಗಳಲ್ಲಿ ನಾಲ್ಕು ಪ್ರತಿಗಳಲ್ಲಿ ನೊಹಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವದೆಂದು ಈ ಮೂಲಕ ಪ್ರಕಟಿಸಿದೆ.

1. ಊಟದ ಪದಾರ್ಥಗಳು (ಎ, ಬಿ, ಸಿ, ಡಿ, ಇ ಮತ್ತು ಎಫ್ ತಂಡ) ಬೆಳಿಗ್ಗೆ 9 ಗಂಟೆ
2. ಆಸ್ಪತ್ರೆ ಅವಶ್ಯಕಗಳು ಬೆಳಿಗ್ಗೆ 10 ಗಂಟೆ

ಮೇಲೆ ಹೇಳಲಾದ ವೇಳೆ ಮತ್ತು ತಾರೀಖು ಆದನಂತರ ಸಲ್ಲಿಸಲಾಗುವ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ

ಮಂಡ್ಯ ಜಿಲ್ಲಾ ಸರ್ಜನ್‌ರವರ ಕಚೇರಿಯಲ್ಲಿ ವಿಧಾಯಕವಾದ ಫಾರಂಗಳನ್ನು ಪ್ರತಿ ಫಾರಂಗೆ ರೂ. 5/- (ಐದು ರೂ. ಗಳು ಮಾತ್ರ) ಪಾವತಿಮಾಡಿ ಪಡೆಯಬಹುದು. ಟೆಂಡರ್ ಸಲ್ಲಿಸಬೇಕಾದ ಎಲ್ಲಾ ನಾಲ್ಕು ಪ್ರತಿಗಳೂ ವಿಧಾಯಕವಾದ ಫಾರಂನಲ್ಲಿ ಇರಬೇಕು ಮತ್ತು ನಾಲ್ಕು ಫಾರಂಗಳಿಗೆ ರೂ. 20/- ಪಾವತಿಮಾಡಬೇಕು.

ಈ ಸಂಬಂಧಪಟ್ಟಂತೆ; ಯಾವುದೇ ಹೆಚ್ಚು ವಿವರ ಬೇಕಾದಲ್ಲಿ, ಅವನ್ನು ಕಚೇರಿ ಕೆಲಸದ ವೇಳೆಗಳಲ್ಲಿ ಮಂಡ್ಯದ ಜಿಲ್ಲಾ ಸರ್ಜನ್‌ರವರ ಕಚೇರಿಯಲ್ಲಿ ಪಡೆಯಬಹುದು.

ಸಹಿ/-
ಜಿಲ್ಲಾ ಸರ್ಜನ್ ಇನ್‌ಛಾರ್ಜ್
ಮಂಡ್ಯ

ಅಭಾವ ಪರಿಸ್ಥಿತಿ ಎದುರಿಸಲು

ಗುಲ್ಬರ್ಗ— ರೇಷ್ಮೆ ಪದಾರ್ಥಗಳ ಒಟ್ಟಾರೆ ವ್ಯಾಪಾರದಲ್ಲಿ ಇಲ್ಲಿಯ ಜನತಾ ಬಜಾರಿಗೆ ನೇಮಿಸಿರುವರೆಂದು ಗೊತ್ತಾಗಿದೆ – ಜಿಲ್ಲೆಯಲ್ಲಿಯ ಕ್ಷಾಮ ಪರಿಹಾರ ಕಾರ್ಯಕ್ರಮದಲ್ಲಿ 72000 ಜನರೂ, ಮಣ್ಣು ರಕ್ಷಣಾ ಕಾರ್ಯದಲ್ಲಿ 38500 ನೇಮಿಸಲ್ಪಟ್ಟಿದ್ದಾರೆ – 59 ತಾಲೋಕುಗಳಲ್ಲಿ 41ಮೇವು ಕೇಂದ್ರ ಸ್ಥಾಪಿಸಲಾಗಿದೆ – ರೂ. 8 65 ಲಕ್ಷ ಖರ್ಚಿನಲ್ಲಿ ಹೊಸ ರಸ್ತೆ ನಿರ್ಮಾಣ, ಕಲ್ಲು ಶೇಖರಣೆ, ನೀರಾವರಿ ಕಾರ್ಯಗಳು ಕೈಗೊಳ್ಳಲಾಗಿದೆ.

★

ಆಂಧ್ರ ಬಂದ್

ವಿಜಯವಾಡ— ಮುಲ್ಕಿ ರೂಲ್ಸು ಸಂಬಂಧದಲ್ಲಿ ತಾ॥ 5 ರಂದು ಆಂಧ್ರ ಬಂದ್‌ಗೆ ಆಂಧ್ರ ಪ್ರಜಾ ಪರಿಷತ್ ಕ್ರಿಯಾ ಸಮಿತಿ ಕರೆಕೊಟ್ಟಿದೆ.

★

ಹಳೇ ಕಾಂಗ್ರೆಸ್ ಸತ್ಯಾಗ್ರಹ

ನವದೆಹಲಿ— ಆಡಳಿತ ಪಕ್ಷದ ನೀತಿ ವಿರೋಧಿಸಿ, ಹಳೇ ಕಾಂಗ್ರೆಸ್ಸು ಪಾರ್ಟಿಯಲ್ಲಿ ಇಂದು ರಾಜೇಂದ್ರ ಪ್ರಸಾದ್‌ರವರ ಜನ್ಮದಿನೋತ್ಸವದಂದು ಸತ್ಯಾಗ್ರಹ ಪ್ರಾರಂಭಿಸಲಿದೆ.

★

ಭುಟ್ಟೋ ವಿರುದ್ಧ ವಿದ್ಯಾರ್ಥಿಗಳು

ರಾವಲ್ಪಿಂಡಿ— ಅಧ್ಯಕ್ಷ ಭುಟ್ಟೋ ಮತ್ತು ಬಂಗ್ಲಾ ದೇಶದ ಮುನ್ನಡೆ ವಿರೋಧಿಸಿ 1000 ವಿದ್ಯಾರ್ಥಿಗಳು ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು

●

ಬಂದ್ ಆಚರಿಸಲಾಯಿತು

ಹಿಂದೂಪುರ— ಮುಲ್ಕಿ ರೂಲ್ಸ್ ಬಗೆ ಪ್ರಧಾನಿಯವರ 5 ಪಾಯಿಂಟ್ ಸೂತ್ರವನ್ನು ವಿರೋಧಿಸಿ ಶನಿವಾರ ಪೂರ್ಣ ಬಂದ್ ನಡೆಯಿತು.

ಗೌರ್ನರರನ್ನು ಕಂಡಿದ್ದರು

ವಿದರಾಸು— ರಾಜ್ಯದಲ್ಲಿ ಶೇಫ್ರು ಬದಲಾವಣೆಗೊಳ್ಳುತ್ತಿರುವ ರಾಜಕೀಯ ಪರಿಸ್ಥಿತಿ ಬಗ್ಗೆ ಗೌರ್ನರರನ್ನು ಪ್ರತ್ಯೇಕಪ್ರತ್ಯೇಕವಾಗಿ ಸ್ಪೀಕರ್ ಮಾತಿಯಲಾಗಂ, ಕಾಂಗ್ರೆಸ್, ಕಮ್ಯೂನಿಸ್ಟ್, ಅಣ್ಣಾ ಡಿಎಂಕೆ ನಾಯಕರು, ಮುಖ್ಯ ಮಂತ್ರಿ ಶ್ರೀ ಕರುಣಾನಿಧಿ ಮಂತ್ರಿಗಳು ಕಂಡು ಮಾತನಾಡಿದರು – ತಾ॥ 7 ರವರೆಗೆ ಡೆಲ್ಲಿಯಲ್ಲಿರಲು ಯೋಚಿಸಿದ್ದ ಗೌರ್ನರರು ಇಲ್ಲಿಯ ಪರಿಸ್ಥಿತಿಗಾಗಿ ಬಂದುಬಿಟ್ಟರು.

●

ಬಂಗ್ಲಾದೇಶದ ಅಧ್ಯಕ್ಷರು

ಬೆಂಗಳೂರು— ಬಂಗ್ಲಾದೇಶದ ಅಧ್ಯಕ್ಷ ಶ್ರೀ ಅಬು ಸಯದ್ ಚೌಧುರಿಯವರು ಕಲ್ಕತ್ತಾಕ್ಕೆ ಪ್ರಯಾಣ ನಾಡುವ ಮುನ್ನ ಪತ್ರಿಕೆಯವರೊಡನೆ ಮಾತನಾಡುತ್ತಾ – ಕೆಲವು ದೇಶಗಳ ಅಡ್ಡಿ ಆತಂಕವಿದ್ದರೂ ಬಂಗ್ಲಾದೇಶವು ವಿಶ್ವಸಂಸ್ಥೆಯಲ್ಲಿ ಪೂರ್ಣ ಸದಸ್ಯತ್ವ ಹೊಂದುವರೆಂದೂ, ಸ್ವಲ್ಪ ಕಾಲ ಹಿಡಿಯುವುದೆಂದೂ ಹೇಳಿದರು – ಬಂಗ್ಲಾ ದೇಶದ ಅತಿ ಕಷ್ಟಕಾಲದಲ್ಲಿ ನೆರವಾದ ಭಾರತವು, ಅದರ ಪುನರ್ನಿರ್ಮಾಣ ಕಾರ್ಯದಲ್ಲೂ ಸಹಾಯ ಮಾಡುವದೆಂಬ ಆಶೆ ವ್ಯಕ್ತಪಡಿಸಿದರು.

★

ಬೀಡಿ ಕೆಲಸಗಾರರು

ಮಂಗಳೂರು— ದಕ್ಷಿಣ ಕನ್ನಡ ಜಿಲ್ಲೆ ಬೀಡಿ ಕೆಲಸಗಾರರು ಅಲ್ಲಿಯ ಪ್ರಮುಖ ಸ್ಥಳಗಳಲ್ಲಿ ತನ್ನ ಕೇಳಿಕೆ ಬಗ್ಗೆ ಕೇಂದ್ರದ ಗಮನ ಸೆಳೆಯಲು ತಾ॥ 6 ರಂದು ಪ್ರದರ್ಶನ ನಡೆಸಲಿರುವರು – ದೇಶದ 30 ಲಕ್ಷ ಬೀಡಿ ಕಾರ್ಮಿಕರ ಕೇಳಿಕೆ: 1000 ಬೀಡಿಗಳಿಗೆ ರೂ. 5-50 ರಾಷ್ಟ್ರೀಯ ಕನಿಷ್ಠ ಕೂಲಿ. ಕಲ್ಯಾಣ ನಿಧಿ ಸ್ಥಾಪನೆ, ಕಾರ್ಖಾನೆ ಶಾಸನ ರೀತ್ಯಾ ಬೋನಸ್ಸು ಪ್ರಸೂತಿ ಸೌಲಭ್ಯ ಮತ್ತು ಹಕ್ಕಿನ ರಜ.

★

ತಮಿಳುನಾಡು ವಿಧಾನಸಭೆ

ಮದರಾಸು— ಉಪಸ್ಪೀಕರ್ ಶ್ರೀ ಪಿ. ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ಇಂದು ವಿಧಾನಸಭೆ ಸಮಾವೇಶವಾಯಿತು – ತಮ್ಮ ಮಂತ್ರಿಮಂಡಲದಲ್ಲಿ ವಿಶ್ವಾಸವಿದೆ ಎಂಬ ವಿಶ್ವಾಸಮತ ಸೂಚನೆಯನ್ನು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿ ಮಂಡಿಸಿದರು; ವಿಶ್ವಾಸಮತ ಚರ್ಚೆಗೆ ದಿನಾಂಕ ಗೊತ್ತು ಮಾಡುವುದಾಗಿ ಸಭಾಧ್ಯಕ್ಷರು ತಿಳಿಸಿದರು.

ತಾವೇ ಸ್ಪೀಕರ್ ಎಂದು ಹೇಳಿಕೊಳ್ಳುವ ಶ್ರೀ ಮತಿಯಾಲಗಂ ವಿಧಾನಸಭೆಗೆ ಬಂದಿರಲಿಲ್ಲ.

ಅಣ್ಣಾ ಡಿಎಂಕೆ, ಸ್ವತಂತ್ರಪಕ್ಷ, ಸಂಸ್ಥಾ ಕಾಂಗ್ರೆಸ್, ಸಿಪಿಐ, ಪಿಎಸ್‌ಪಿ ಮತ್ತು ಕಾಂಗ್ರೆಸ್ ಸಭೆಯಲ್ಲಿ ಹಾಜರಿರಲಿಲ್ಲ.

★

10 ದಿನಗಳ ಮುಷ್ಕರ

ಹೈದರಾಬಾದು— ರಾಜ್ಯ ಸರಕಾರದ ಆಂಧ್ರ ನೌಕರರು ಡಿಸೆಂಬರು 7 ರಿಂದ 10 ದಿನಗಳವರೆಗೆ ಮುಷ್ಕರ ಹೂಡುವದಾಗಿ ಇಲ್ಲಿಯ ಎಂಜಿಓ ಸಂಘ ಪ್ರಕಟಿಸಿದೆ.

●

ಮೇವಿನ ಸಹಾಯ

ಮಂಗಳೂರು— ರಾಜ್ಯದ ಅಭಾವ ಪೀಡಿತ ಭಾಗಗಳಿಗೆ ಕಳುಹಿಸಲು ದಕ್ಷಿಣ ಕನ್ನಡ ಕಾಂಗ್ರೆಸ್ ಸಮಿತಿ 100 ಲಾರಿ ಮೇವು ಕೊಡುವದಾಗಿ ಸರಕಾರಕ್ಕೆ ತಿಳಿಸಿದೆ.

○

ರೊಟ್ಟಿಯ ನಾಶ

ಕೊಚ್ಚಿ— ಬೆಂಗಳೂರು ಮತ್ತು ಅಹಮದಾಬಾದಿನಲ್ಲಿನ ನವೀನ ಬೇಕರಿಗಳಲ್ಲಿ ತಯಾರಾದ ಬ್ರೆಡ್ಡಿನ ಹೆಚ್ಚು ದಾಸ್ತಾನುಗಳನ್ನು ಸುಟ್ಟು ನಾಶಪಡಿಸಲಾಗುತ್ತಿದೆಯೆಂದೂ, ಅವುಗಳನ್ನು ಜಾನುವಾರುಗಳಿಗೆ ಉಪಯೋಗಿಸಬಹುದೆಂದೂ ರೊಟ್ಟಿ ನೌಕರರ ಸಂಘದ ಅಧ್ಯಕ್ಷ ಜಾರ್ಜ್ ಫರ್ನಾಂಡಸ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವುಡ್‌ಲಾಂಡ್ಸ್ 1 12 72 ರಿಂದ ಅಮೋಘ ಪ್ರಾರಂಭ

ಆಲ್ ಇಂಡಿಯಾ ಪಿಕ್ಚರ್ಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ದಿಲ್ ದೌಲತ್ ದುನಿಯಾ

ಪಾತ್ರ – ರಾಜೇಶ್ ಖನ್ನ, ಸಾಧನ, ಅಶೋಕ ಕುಮಾರ್, ಹೆಲೆನ್,
ಓಂ ಪ್ರಕಾಶ್ ಸಂಗೀತ : ಶಂಕರ್ ಜೈಕಿಷನ್ ದಿನ 3 ಪ್ರದರ್ಶನಗಳು
ಬೆಳಗಿನ ಪ್ರದರ್ಶನ 10-30 ಟಿಲಾಡ್

ಅಪೆರಾ 1 12 72 ರಿಂದ

ಅತ್ಯಮೋಘ ಹಿಂದಿ ಗೇವ ಕಲರ್ ಚಿತ್ರ

ಏಕ್ ಬಾರ್ ಮುಸ್ಕುರದೋ

ಪಾತ್ರ : ಜಾಯ್ ಮುಖರ್ಜಿ, ತನುಜಾ, ದೇವ್ ಮುಖರ್ಜಿ
ಸಂಗೀತ – ಓ. ಪಿ. ನಯ್ಯರ್ ದಿನ 3 ಪ್ರದರ್ಶನಗಳು



Protect the Cow

Help The Gorakshana

— Humanitarian Propoganda Monthly —

Edited Printedand Published by Dharmapracharanirata M S Krishna Rao (Propretor) at the Satvavad Press, Chamarajapuram Mysore

Quality Printing Neat Binding

Lakshminarasimha Press

Sivarampet, Mysore

ಕೋಪವೆಂಬುದು ಅನರ್ಥ ಸಾಧನೆ

ನಾವು ಸಾಮಾನ್ಯವಾಗಿ ತಪ್ಪು ಮಾಡುವುದು ಕೋಪ ಬಂದ ಸಮಯದಲ್ಲಿ ಅಂದರೆ ಮೊದಲಿನಿಂದಲೇ ಕೋಪವನ್ನು ಬಿಡಲು ಶ್ರಮಿಸಬೇಕು.

ಇನ್ನು ಕ್ರೈಸ್ತಮತ ಸಂದೇಶವಿತ್ತಿರುವಂತೆ– ಮತ್ತಾಯ : ಸಮಾಧಾನ ಪಡಿಸುವವರು ಧನ್ಯರು, ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು ; ಲೂಕ : ಕತ್ತಲಲ್ಲಿಯೂ, ಮರಣಾಂಧಕಾರದಲ್ಲಿಯೂ ವಾಸಿಸುವಂತವನಿಗೆ ಬೆಳಕನ್ನು ಕೊಡಿಸಿ ಸತ್ಪಥದಲ್ಲಿ ಹೋಗುವಂತೆ ಶ್ರಮಿಸಬೇಕು ; ಭೂಲೋಕದಲ್ಲಿ ಸುಮನಸ್ಕರಿಗೆ ಶಾಂತಿ, ನನ್ನ ಶಾಂತಿಯನ್ನು ನಿಮಗೆ ಕೊಟ್ಟಿದ್ದೇನೆ, ಎಂದು ಶಾಂತಿಯನ್ನೇ ತ್ಯಜಿಸಿದ್ದಾರೆ – ಯೋಹನ್ನ.

ಕಣ್ಣು ದೇಹಕ್ಕೆ ದೀಪವಾಗಿದೆ, ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಿಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವುದು ; ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವುದು ; ಹೀಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟೆನ್ನಬೇಕು – ಯೋಹಾನ್ನ – ಅವರ ಶಾಂತಿಯನ್ನು ನಮಗೆ ಕೊಟ್ಟು ಈ ವೇದ ವಾಕ್ಯವನ್ನು ಪ್ರಚಾರ ಮಾಡಿದ್ದಾರೆ. (ಕೃ ಸಂ.)

ದಿವ್ಯವಾಣಿ

ಪೇನುನನ್ನೂ ಕೆಮ್ಮನ್ನೂ ಮುಚ್ಚಿಡಲು ಸಾಧ್ಯವಿಲ್ಲ – ಜಾರ್ಜ್ ಹರ್ಬರ್ಟ್

ಧ್ವಜ ದಿನಚರಣೆ ★ 7ನೇ ಡಿಸೆಂಬರ್

.... ಆಚರಿಸಲಾಗುತ್ತದೆ ....

ಅಂದು 25 ಪೈಸೆ ಮೌಲ್ಯದ ಸಾಂಕೇತಿಕ ಧ್ವಜ ಹಾಗೂ ರೂ. 2 ಮೌಲ್ಯದ ಧ್ವಜಗಳನ್ನು ಮಾರಲಾಗುತ್ತದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಇವನ್ನು 5 ಪೈಸೆಗೂ, ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ 10 ಪೈಸೆಗೂ ಮಾರಲಾಗುವುದು.

ಅಂದು ಧ್ವಜವನ್ನು ಕೊಂಡು, ಧ್ವಜ ದಿನಾಚರಣೆ ನಿಧಿಗೆ ಕಾಣಿಕೆ ಸಲ್ಲಿಸಬೇಕೆಂದು ರಾಜ್ಯ ಸರಕಾರ ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿದೆ. ಈ ನಿಧಿಯನ್ನು ರಕ್ಷಣಾ ದಳಗಳ ಸಿಬ್ಬಂದಿಯ ಕಲ್ಯಾಣಕ್ಕಾಗಿ ಉಪಯೋಗಿಸಲಾಗುತ್ತದೆ.

SHAKTI

SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ